# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1054 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಮುಖವಾಗಿ ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸಿಸುವ ಧನಗರಗೌಳಿ ಸಮುದಾಯವು ಎಲ್ಲಾ ಜಿಲ್ಲೆಗಳಲ್ಲಿ ಪ್ರವರ್ಗ-1 ರಲ್ಲಿರುವ ಗೌಳಿ ಹೆಸರಿನ ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ, ಬೆಳಗಾವಿ ಜಿಲ್ಲೆಯ ಗೌಳಿ ಸಮುದಾಯವಿರುವ 34 ಹಳ್ಳಿಗಳ ಪೈಕಿ ಕೆಲವು ಹಳ್ಳಿಗಳು ಬಿಟ್ಟರೆ ಉಳಿದ ಹಳ್ಳಿಗಳಲ್ಲಿ ಪ್ರವರ್ಗ-2ಎ ನಲ್ಲಿ ಇರುವ ಧನಗರ ಎಂದು ಜಾತಿ ಪ್ರಮಾಣಪತ್ರ ಪಡೆಯುತ್ತಿದ್ದು, ಅನಕ್ಷರಸ್ಥರಾದ ಬೆಳಗಾವಿ ಜಿಲ್ಲೆಯಲ್ಲಿನ ಈ ಸಮುದಾಯದ ಜನರಿಗೆ ಅನ್ಯಾಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30-03-2002ರ ಜಾತಿ ಪಟ್ಟಿಯನ್ವಯ, ಪ್ರವರ್ಗ-1ರ ಕ್ರಮ ಸಂಖ್ಯೆ: 86(ಹೆಚ್) ನಲ್ಲಿ ಗೌಳಿ ಜಾತಿಯನ್ನು ಹಾಗೂ ಪ್ರವರ್ಗ-2ಎ ರಡಿಯ ಕ್ರಮ ಸಂಖ್ಯೆ:7(ಸಿ) ರಡಿ ಧನಗರ್ ಜಾತಿಯನ್ನು ಸೇರ್ಪಡೆಗೊಳಿಸಲಾಗಿರುತ್ತದೆ.<br><br>ಮುಂದುವರೆದು, ಗೌಳಿ ಜಾತಿ ಹಾಗೂ ಧನಗರ ಜಾತಿಯು ಬೇರೆ-ಬೇರೆ ಪ್ರವರ್ಗದಲ್ಲಿರುತ್ತವೆ. |
| ಆ | ಅನ್ಯಾಯವಾಗಿರುವ ಈ ಸಮುದಾಯದ ಜನರಿಗೆ ಪ್ರವರ್ಗ-1 ರಲ್ಲಿ ಜಾತಿ ಪ್ರಮಾಣ ಪತ್ರ ಪಡೆಯುವುದರ ಬಗ್ಗೆ ಸರ್ಕಾರದ ನಿಲುವೇನು? | ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30-03-2002ರ ಜಾತಿ ಪಟ್ಟಿ ಯನ್ವಯ, ಪ್ರವರ್ಗ-1ರ ಕ್ರಮ ಸಂಖ್ಯೆ: 86(ಹೆಚ್)ನಲ್ಲಿ ಗೌಳಿ ಜಾತಿಯನ್ನು ಹಾಗೂ ಪ್ರವರ್ಗ-2ಎ ರಡಿಯ ಕ್ರಮ ಸಂಖ್ಯೆ: 7(ಸಿ)ರಡಿ ಧನಗರ್ ಜಾತಿಯನ್ನು ಸೇರ್ಪಡೆ ಗೊಳಿಸಲಾಗಿರುತ್ತದೆ. ಧನಗರ ಗೌಳಿ ಜಾತಿಯು ಹಿಂದುಳಿದ ವರ್ಗಗಳ ಜಾತಿಪಟ್ಟಿಯಲ್ಲಿ ನಮೂದಾಗಿರುವುದಿಲ್ಲ. |

ಸಂಖ್ಯೆ: ಹಿಂವಕ 58 ಬಿಸಿಎ 2024

**(ಶಿವರಾಜ.ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು